KATK010000032021

## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು

## ವಿಶೇಷ ಮೊಕದ್ದಮೆ.2/2021

ಪ್ರಾ.ಸಾ. ಃ **3**

ದೋ.ಸಾ. ಃ **1**

ದಿ.**23.10.2025.**

| | |
|---|---|
| ಹೆಸರು | ಃ ನಾಗರಾಜು ಎಸ್. |
| ತಂದೆಯ ಹೆಸರು | ಃ ಲೇಟ್ ಸಿದ್ದಲಿಂಗಪ್ಪ |
| ವಯಸ್ಸು | ಃ **60** ವರ್ಷ |
| ಉದ್ಯೋಗ | ಃ ವ್ಯವಸಾಯ (ನಿವೃತ್ತ ಎಎಸ್ಐ) |
| ವಾಸಸ್ಥಳ | ಃ ಗಿರಿಗೊಂಡನಹಳ್ಳಿ |

ಸಾಕ್ಷಿಯನ್ನು ಕರೆಸಿ, ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ**

1. 2014 ರಿಂದ 2021 ರವರೆಗೆ ನಾನು ಸಿಇಎನ್ ಪೋಲೀಸ್ ಠಾಣೆ ತುಮಕೂರಿನಲ್ಲಿ ಮುಖ್ಯ ಪೇದೆ 317 ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.
2. ದಿ.19.09.2020 ರಲ್ಲಿ ಮೇಲಧಿಕಾರಿಗಳ ಆದೇಶದಂತೆ ನನಗೆ ಮತ್ತು ಮುಖ್ಯ ಪೇದೆ 225 ಮಲ್ಲೇಶ್ ರವರಿಗೆ ಗಾಂಜಾ ಮಾರಾಟದ ಬಗ್ಗೆ ಮಾಹಿತಿ ಸಂಗ್ರಹಿಸಲು ತಿಳಿಸಿದ್ದು, ಅದರಂತೆ ನಾನು ಮತ್ತು ಮಲ್ಲೇಶ್ ರವರು ಬೆಳಗುಂಬ, ದುರ್ಗದಹಳ್ಳಿ, ನಾಮದಚಿಲುಮೆ ಕಡೆಯಿಂದ ಬಂದು ಬೆಳಿಗ್ಗೆ 8.00 ಗಂಟೆಗೆ ಉರ್ಡಿಗೆರೆ ಬಸ್ ನಿಲ್ದಾಣದಲ್ಲಿದ್ದಾಗ ಮಾಹಿತಿದಾರರು ಒಬ್ಬರಿಂದ ಉರ್ಡಿಗೆರೆ ಗ್ರಾಮದ ಬಸವೇಶ್ವರ ದೇವಸ್ಥಾನದ ಮುಂಭಾಗ ಸಿಸಿ ರಸ್ತೆಯ ಪೂರ್ವದಲ್ಲಿ ಅಮ್ಜದ್ ಖಾನ್ ಎಂಬ ವ್ಯಕ್ತಿ ಗಾಂಜಾ ಮಾರಾಟ ಮಾಡುತ್ತಿದ್ದಾನೆಂದು ಮಾಹಿತಿ ತಿಳಿದ ಮೇರೆಗೆ ನಾನು ಮತ್ತು ಮಲ್ಲೇಶ್ ರವರು ಸ್ಥಳಕ್ಕೆ ಹೋಗಿ ಗೌಪ್ಯವಾಗಿ ನೋಡಲಾಗಿ ಕೆಲವರು ಆ ಮನೆಗೆ ಹೋಗಿ ಬರುತ್ತಿದ್ದುದನ್ನು ಗಮನಿಸಿ, ನಾವು ಆ

ಸ್ಥಳಕ್ಕೆ ಹೋಗಿ ನೋಡಲಾಗಿ ಅಮ್ಜದ್ ಖಾನ್ ಎಂಬ ವ್ಯಕ್ತಿ ಬಿಳಿ ಪ್ಲಾಸ್ಟಿಕ್ ಚೀಲದಲ್ಲಿ ಸೊಪ್ಪನ್ನು ಇಟ್ಟುಕೊಂಡಿದ್ದು, ನಾವುಗಳು ಅದನ್ನು ಪರಿಶೀಲನೆ ಮಾಡಿ ನೋಡಲಾಗಿ ಅರ್ಧಂಬರ್ಧ ಹಸಿ ಗಾಂಜಾ ಸೊಪ್ಪು ಆಗಿದ್ದು ಸ್ಥಳದಲ್ಲಿ ಮುಖ್ಯಪೇದೆ ಮಲ್ಲೇಶ್ ರವರನ್ನು ಬಿಟ್ಟು ನಾನು ಠಾಣೆಗೆ ಬಂದು, ಟೈಪ್ ಮಾಡಿಸಿ ಠಾಣಾಧಿಕಾರಿಯವರಿಗೆ ಮುಂದಿನ ಕ್ರಮ ಜರುಗಿಸಲು ದೂರನ್ನು ನೀಡಿರುತ್ತೇನೆ. ಆ ದೂರನ್ನು ನೋಡುತ್ತಿದ್ದು ಅದನ್ನು ನಿಶಾನೆ ಪಿ12 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ12(ಎ) ಎಂದು ಗುರುತಿಸಲಾಯಿತು. ಅಮ್ಜದ್ ಖಾನ್ ರವರನ್ನು ನೋಡಿದರೆ ಗುರುತಿಸುತ್ತೇನೆ. ನೋಡಿ ಗುರುತಿಸಿದ್ದೇನೆ.

**ಪಾಟೀ ಸವಾಲು ಶ್ರೀ.ಜಿ.ಎಸ್.ರೆಹಮಾನ್, ವಕೀಲರಿಂದ 1 ನೇ ಆರೋಪಿತನ ಪರವಾಗಿ:**

3. ನಮ್ಮ ಠಾಣೆಯಲ್ಲಿ 11 ಜನ ಪೋಲೀಸ್ ಸಿಬ್ಬಂದಿಯವರು ಇದ್ದರು. ಗಾಂಜಾ ಮಾರಾಟದ ಬಗ್ಗೆ ಮಾಹಿತಿ ಸಂಗ್ರಹಿಸಲು ಹಿಂದಿನ ದಿನ ಮೌಖಿಕವಾಗಿ ಹೇಳಿದ್ದರು. ಬೆಳಿಗ್ಗೆ 7.00 ಗಂಟೆಗೆ ಠಾಣೆಯಿಂದ ಹೊರಟಿದ್ದೆವು. ನಮ್ಮ ಠಾಣೆಯಿಂದ ದುರ್ಗದಹಳ್ಳಿ 15 ಕಿ ಮೀ ದೂರ. ದುರ್ಗದಹಳ್ಳಿಯನ್ನು 7.30 ಗಂಟೆಗೆ ಬಿಟ್ಟೆವು. ಬೆಳಿಗ್ಗೆ 8.00 ಗಂಟೆಗೆ ಊರ್ಡಿಗೆರೆ ಬಸ್ ನಿಲ್ದಾಣಕ್ಕೆ ಬಂದೆವು. ಬೆಳಿಗ್ಗೆ 8.00 ಗಂಟೆಗೆ ಊರ್ಡಿಗೆರೆ ಬಸ್ ನಿಲ್ದಾಣಕೆ ಹೋಗುವಾಗಲೇ ಮಾಹಿತಿದಾರರು ಬಂದು ಮಾಹಿತಿ ಕೊಟ್ಟರು. ಊರ್ಡಿಗೆರೆ ಬಸ್ ನಿಲ್ದಾಣದಲ್ಲಿ ಔಟ್ ಪೋಸ್ಟ್ ಇದೆ ಎಂದರೆ ಸರಿಯಲ್ಲ. ಅದು 300 ಮೀಟರ್ ದೂರದಲ್ಲಿದೆ. ಊರ್ಡಿಗೆರೆ ಬಸ್ ನಿಲ್ದಾಣ ಕ್ಯಾತ್ಸಂದ್ರ ಪೋಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುತ್ತದೆ. ಕ್ಯಾತ್ಸಂದ್ರ ಪೋಲೀಸ್ ಠಾಣೆಗೆ ವಿಷಯ ತಿಳಿಸಿಲ್ಲ. ಬಸವೇಶ್ವರ ದೇವಸ್ಥಾನದ ಎದುರಿಗೆ ಕಾಂತಣ್ಣನ ಮನೆ ಇದೆ. 1 ನೇ ಆರೋಪಿ ಮನೆ ದಕ್ಷಿಣಾಭಿಮುಖವಾಗಿದೆ. ಉತ್ತರ ದಕ್ಷಿಣದಲ್ಲಿ ಬೇರೆ ಮನೆಗಳು ಇವೆ, ಯಾರದೆಂದು ಗೊತ್ತಿಲ್ಲ. 1 ನೇ ಆರೋಪಿಯ ಮನೆಯ ಅಕ್ಕಪಕ್ಕ ಯಾರ ಮನೆಗಳು ಇವೆ ಎಂದು ಗೊತ್ತಿಲ್ಲ. ಬಿಳಿ ಕವರ್ ಇಟ್ಟುಕೊಂಡಿದ್ದ ಎಂದು ದೂರಿನಲ್ಲಿ ಬರೆದಿಲ್ಲ. 8.30 ಗಂಟೆಗೆ ಊರ್ಡಿಗೆರೆಯಿಂದ ಹೊರಟು 8.45 ಗಂಟೆಗೆ ಪೋಲೀಸ್ ಠಾಣೆಗೆ ಬಂದೆನು. ನಮ್ಮ ಠಾಣೆಯಿಂದ ಊರ್ಡಿಗೆರೆಗೆ 15-16 ಕಿ ಮೀ ಆಗಬಹುದು ಎಂದರೆ ಸರಿಯಲ್ಲ. 12 ಕಿ ಮೀ ದೂರವಾಗುತ್ತದೆ. ಬರಲು ಅರ್ಧ ಗಂಟೆ ಬೇಕಾಗುತ್ತದೆ ಎಂದರೆ ಸರಿಯಲ್ಲ. ನಾನು ಪೋಲೀಸ್ ಠಾಣೆಯಲ್ಲಿ ದೂರನ್ನು ಟೈಪ್ ಮಾಡಿಸಿದ್ದೇನೆ. ನಾವು

ಉರ್ಡಿಗೆರೆಗೆ ಹೋಗಿಲ್ಲ, 1 ನೇ ಆರೋಪಿ ಅಮ್ಜದ್ ಖಾನ್ ಗಾಂಜಾ ಸೊಪ್ಪು ಮಾರಾಟ ಮಾಡುತ್ತಿರಲಿಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 1 ನೇ ಆರೋಪಿಯಿಂದ ಗಾಂಜಾ ಸೊಪ್ಪಿನ ಕವರನ್ನು ವಶಪಡಿಸಿಕೊಂಡಿಲ್ಲ ಎಂದರೆ ನಿಜ. 1 ನೇ ಆರೋಪಿ ಅಮ್ಜದ್ ಖಾನ್ ನನ್ನು ಆ ದಿನ ನೋಡಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು ಶ್ರೀ.ಹೆಚ್.ವಿ.ರಂಗನಾಥ ರೆಡ್ಡಿ, ವಕೀಲರಿಂದ 2 ನೇ ಆರೋಪಿತನ ಪರವಾಗಿಃ**

ಇಲ್ಲ

ಮರು ವಿಚಾರಣೆ ಃ ಇಲ್ಲ

(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು